ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ

ಬಸ್ಸುಗಳಲ್ಲಿ ಏಜೆಂಟರು ತಮ್ಮಲ್ಲಿ ಚಿಲ್ಲರೆ ಇದ್ದರೂ ನಮಗೆ 'ಆಮೇಲೆ ಕೊಡ್ತೀನಿ' ಎನ್ನುವುದೇಕೆ?



ನೀವು ಮರೆತರೆ ಅವರಿಗೆ ಉಳಿದೀತೆಂಬ ಚಿಲ್ಲರೆ ಬುದ್ಧಿ.

ಹೆಚ್.ವಿ. ಶ್ರೀಧರ್, ಬೆಂಗಳೂರು

ಸಾಮಾನ್ಯರಿಗೆ ಇಡೀ ಜೀವನ ಸಾಕಾಗಿಹೋಗಿದ್ದರೆ ರಾಜಕಾರಣಿಗಳಿಗೆ ED ಜೀವನ ಸಾಕಾಗಿಹೋಗಿರುತ್ತಲ್ಲವೆ?

ಊಹೂಂ. ರಾಜಕಾರಣಿಗಳಿಗೆ ED ಒಂದು obstacle course ಅಷ್ಟೆ.

ಜಾನಿ, ಬೆಂಗಳೂರು

ಅನುಮಾನದ ಹುಳು ಹೇಗಿರುತ್ತೆ?

ಹೀಲಿಯಂ ಬಲೂನಿನಂತೆ – ಮೊದಲು ಇಷ್ಟೇ ಇಷ್ಟು; ಪುಷ್ಟಿ ದೊರೆತಾಗ ಊರಗಲ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

ದಾಸರ ಹಾಡುಗಳಿರುವಂತೆ ತ್ರಿಲೋಕ ಸಂಚಾರಿ ನಾರದನ ಹಾಡುಗಳಿಲ್ಲ. ಏಕೆ?



ಅವನೊಡನೆ ಮೋಡಗಳಲ್ಲಿ ಸಂಚರಿಸಿ ಬರೆದುಕೊಳ್ಳುವವರು ಸಿಗಲಿಲ್ಲವಂತೆ.

ಪಿ.ಜೆ. ರಾಘವೇಂದ್ರ, ಮೈಸೂರು

ರಾಜಕಾರಣಿಗಳ ಪಾದಯಾತ್ರೆಗೂ, ಗಜಪಯಣಕ್ಕೂ ಏನು ವ್ಯತ್ಯಾಸ?

ರಾಜಕಾರಣಿಗಳದು ಪಾದಯಾತ್ರೆಯಲ್ಲ, ಸೊಂಪಾದ ಯಾತ್ರೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ತಮ್ಮ ವಿವಾಹದ ದಿನಾಂಕವನ್ನು ಸಾಮಾನ್ಯವಾಗಿ ಗಂಡಂದಿರು ಮರೆಯುತ್ತಾರಲ್ಲ?

ಪ್ರಾಣಿಗಳಿಗೆ ಮೂಗುದಾರ ಹಾಕಿದ ದಿನದ ನೆನಪಿರುವುದಿಲ್ಲ.

ಎಸ್ಸೆನ್ ಮಹಾಬಲರಾವ್, ಎನ್ನರ್ಪುರ

ಎಟುಕದಿರುವುದಕ್ಕೇ ಕೈ ಹಾಕುವುದೇಕೆ?

ಕನ್‌ವೆನ್ಷನ್ ಬಿಟ್ಟು ಇನ್‌ವೆನ್ಷನ್ ಮಾಡಲು ಇದೇ ಮಾರ್ಗ.

ಬಿ. ಬಸವರಾಜ್, ಹರಿಹರ

ಹೆಚ್ಚು ಅಪಾಯಕಾರಿಯಾದದ್ದು ಪ್ರಣಯವೋ, ಪ್ರಳಯವೋ?

ಸಂಸಾರದಲ್ಲಿ ಪ್ರಳಯ ಎಬ್ಬಿಸುವ ಪ್ರಣಯ.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ

ನಿರಾಶಾವಾದಿ, ಆಶಾವಾದಿ, ಅವಕಾಶವಾದಿಗಳಲ್ಲಿ ಯಾರನ್ನು ವರಿಸಬೇಕು?

ಅವಕಾಶವಾದಿ ಲಿವಿಂಗ್ ಟುಗೆದರ್ ಎನ್ನುವಳು. ನಿರಾಶಾವಾದಿ ವರಿಸಳು. ಮಿಕ್ಕವಳನ್ನೇ ವರಿಸಬೇಕು.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಬಾರ್‌ಗಳಲ್ಲಿ ಸೆಲ್ಫ್ ಸರ್ವೀಸ್ ಪದ್ಧತಿ ಬಂದರೆ?

ರಾತ್ರಿ ಕಸ ಗುಡಿಸುವಾಗ ಗಾಜಿನ ಚೂರುಗಳೊಡನೆ ಬಿದ್ದ ಕುಡುಕರನ್ನೂ ಗುಡಿಸಬೇಕಾಗುತ್ತದೆ.

ಬಿ.ಆರ್. ಉಷಾ, ಬಾಲಿ

ಚಪ್ಪಾಳೆ ಹೊಡೆದ್ರೆ ಕೇಳ್ಸಲ್ಲ; ಕೈಮುಗಿದ್ರೆ ಕಾಣ್ಸಲ್ಲ. ನಿಮ್ಗೆ ನನ್ನ ಮೆಚ್ಚುಗೆ ಹೇಗೆ ತಿಳಿಸ್ಲಿ?

ದಿನ ಬೆಳಗುವ ಉಷೆಯಂತೆ ಆಗಾಗ್ಗೆ ಹೀಗೆ ಅಂಕಣದಲ್ಲಿ ತೂರಿ ಬಂದು.

ಸಿ.ಕೆ. ಗಣಪ್ಪನವರ, ಮುಂಡರಗಿ

ಅಧಿಕಾರಿಯದು 40 ವರ್ಷ, ಜನಪ್ರತಿನಿಧಿಯದು 5 ವರ್ಷ, ಆದರೂ ಜನಪ್ರತಿನಿಧಿಯ ದೌಲತ್ತು ಹೆಚ್ಚಿರುತ್ತದಲ್ಲ?

ಜನಪ್ರತಿನಿಧಿ ಕೋರೈಸಿ ಢಂ ಎನ್ನುವ ರಾಕೆಟ್; ಅಧಿಕಾರಿ ಚಿನಕುರುಳಿಯ ಡಬ್ಬಿ.

ಉಷಾ ಸೋಗಲ್, ತುರಹಳ್ಳಿ

ಹಿಂದೆಲ್ಲಾ ಧಾರಾವಾಹಿಗಳಲ್ಲಿ ನಟರು ಪೌರುಷ ತೋರಲು ಮೀಸೆ ತಿರುವುತ್ತಿದ್ದರು. ಈಗ ಹುಬ್ಬು ತೀಡಿಕೊಳ್ಳುವರಲ್ಲಾ?

ಅಂಟಿಸಿದ ಮೀಸೆಯ ಗೋಂದಿನ ಕ್ವಾಲಿಟಿ ಚೆನ್ನಾಗಿರಲ್ವಂತೆ.

## ಬಹುಮಾನಿತ ಪ್ರಶ್ನೆ

ಜಗದೀಶ ಬಿ.ಹೊಸೂರು, ಮೈಸೂರು

ಅಕ್ರಮ, ಅನ್ಯಾಯಗಳಿಂದ ಸಂಪಾದಿಸಿದ ಹಣವನ್ನು ಕಾಣಿಕೆಯಾಗಿ ಪಡೆದ ದೇವರಿಗೆ ಪಾಪ ಬರುವುದಿಲ್ಲವೆ?

ಊಹೂಂ. ದೊಡ್ಡವರು ಬುಲೆಟ್‌ಪ್ರೂಫ್ ಧರಿಸುವಂತೆ ದೇವ ಸಿನ್‌ಪ್ರೂಫ್ ಲೇಯರ್ ಧರಿಸುತ್ತಾನೆ.

ಪದ್ಮಶ್ರೀ ಹೆಚ್.ಎಸ್. ಬೆಂಗಳೂರು

ನದಿಗೆ 108 ಬಾಗಿನ ಸಮರ್ಪಿಸುವ ಮಂತ್ರಿಗಳು ಜಲಮಾಲಿನ್ಯದ ಬಗ್ಗೆ ಯೋಚಿಸುವುದಿಲ್ಲ. ಏಕೆ?

'ಮಂತ್ರಿಮಾಲಿನ್ಯ'ವನ್ನೇ ತಡೆದುಕೊಳ್ಳಬಲ್ಲ ಸಮಾಜಕ್ಕೆ ಇವೇನು ಮಹಾ ಎಂಬ ಧೋರಣೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಮಾತು ಬೆಳ್ಳಿ; ಮೌನ ಬಂಗಾರ. ನಗು?

ಒರೆಗಲ್ಲು.

ಸೀಮಂತಿನಿ ದೇಸಾಯಿ, ಬೆಂಗಳೂರು

ಮನುಷ್ಯನ ಮೆದುಳು ಒಂದೇ. ತಾಮಸ ಎಲ್ಲಿ ಹುಟ್ಟಿತು ಗುರುಗಳೆ?



ಮದವೆಂಬ ವೈರಸ್ ಮೆದುಳನ್ನು ಹೊಕ್ಕಾಗ.

ಪಿ. ಜಯವಂತ ಪೈ, ಕುಂದಾಪುರ

ತೆರಿಗೆಗೂ, ಹೆರಿಗೆಗೂ ವ್ಯತ್ಯಾಸವೇನು?

ತೆರಿಗೆಯಿಂದ ದೇಶೋನ್ನತಿ; ಹೆರಿಗೆಯಿಂದ ಕುಟುಂಬದ ಉನ್ನತಿ.

ಸಿಹಿಮೊಗೆ ರಮೇಶ್, ಮೈಸೂರು

ನ್ಯಾಯಾಧೀಶರು ಕೊಡುವ ತೀರ್ಪನ್ನು ದಿನಗಟ್ಟಲೆ ಕಾಯ್ದಿರಿಸಲು ಕಾರಣವೇನು?

ಕಾಯಿಸಿದಷ್ಟೂ ತೀರ್ಪಿನ ಬರೆ ಸ್ಪಷ್ಟವಾಗಿ ಮೂಡುವುದೆಂದು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ರಾಜಕಾರಣಿ ಪುಲ್ಲಿಂಗವೋ, ಸ್ತ್ರೀಲಿಂಗವೋ?

ಅವರವರ ಪಕ್ಷಗಳಿಗೆ ಇಷ್ಟಲಿಂಗ, ದೇಶಕ್ಕೆ ಕಷ್ಟಲಿಂಗ.

■ ರಾಮ್